ಅಭಿನಂದನಾ ಸಂದೇಶ

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಕಪಿಲ್‌ದೇವ್‌ರವರು 432 ವಿಕೆಟ್‌ಗಳನ್ನು ತೆಗೆದುಕೊಂಡು ಒಂದು ವಿಶ್ವ ದಾಖಲೆಯನ್ನು ಮಾಡಿದ್ದಾರೆ ಹಾಗೂ ರಿಚರ್ಡ್ ಹ್ಯಾಡ್ಲಿಯವರ ರೆಕಾರ್ಡ್ ಬ್ರೇಕ್ ಮಾಡಿ ವಿಶ್ವದ ಅಷ್ಟೇ ಅಲ್ಲ, ನಮ್ಮ ನಾಡಿನ ಎಲ್ಲ ಜನರ ಗೌರವಕ್ಕೆ ಪಾತ್ರರಾಗಿದ್ದಾರೆ. ಹಾಗಾಗಿ ಈ ಸದನದಲ್ಲಿ ಒಂದು ಅಭಿನಂದನಾ ನಿರ್ಣಯವನ್ನು ಮಂಡಿಸಿ ಅವರಿಗೆ ಕಳುಹಿಸಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಅದನ್ನು ಅನುಮೋದನೆ ಮಾಡುತ್ತಿದ್ದೇನೆ. ಇದು ತುಂಬಾ ಅಗತ್ಯವಿರುವಂತಹದ್ದು ಈ ಬಗ್ಗೆ ನಿರ್ಣಯ ಮಾಡಿ ಕಳುಹಿಸಿ ಕೊಡಿ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮಿಂದಲೇ ಅಭಿನಂದನೆ ಬಂದರೆ ಅದು ಸಭೆಯ ಸರ್ವಾನುಮತದ ಅಭಿನಂದನೆಯಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಈ ಮನೆಯ ಒಟ್ಟಾರೆ ಅಭಿಪ್ರಾಯವನ್ನು ಪಡೆದು ತಾವೇ ಒಂದು ಸಂದೇಶವನ್ನು ಕಳುಹಿಸಿಕೊಡಬೇಕು. ನಾವು ನಿರ್ಣಯ ಪಾಸ್ ಮಾಡುವುದು ಬೇಡ. ಪ್ರತಿಯೊಂದಕ್ಕೂ ಇಲ್ಲಿ ಗೊತ್ತುವಳಿಯನ್ನು ಪಾಸು ಮಾಡುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಎಲ್ಲ ಸದಸ್ಯರ ಒಮ್ಮತದ ಅಭಿಪ್ರಾಯ, "ನಮ್ಮ ದೇಶಕ್ಕೆ ನೀವು ಗೌರವ ತಂದುಕೊಟ್ಟಿದ್ದೀರಿ ಅದಕ್ಕೆ ನಿಮಗೆ ಅಭಿನಂದನೆಗಳು" ಎಂದು ಒಂದು ಸಂದೇಶ ಕಳುಹಿಸಿ ಕೊಡಿ.

ಅಧ್ಯಕ್ಷರು : ಆಯಿತು ಕಳುಹಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇಡೀ ರಾಜ್ಯದ ಸದನದ ಒಟ್ಟಾರೆ ಅಭಿಪ್ರಾಯವನ್ನು ತಮ್ಮ ಮೂಲಕ ಕಳುಹಿಸಿ ಕೊಡಿ.

ಅಧ್ಯಕ್ಷರು : ಆಗಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಅತ್ಯಂತ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಲು ತಮ್ಮ ಕೊಠಡಿಗೆ ಬಂದು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು : ತಾವು ಪ್ರಸ್ತಾಪ ಮಾಡಿ.

ನಿಲುವಳಿ ಸೂಚನೆ (ಅನುಮತಿ ಕೋರಿ ಚರ್ಚೆ)

ರಾಜ್ಯದಲ್ಲಿ ಮೂರು ವರ್ಷಗಳಿಂದ ಸತತವಾಗಿ ಅತಿವೃಷ್ಟಿ, ನೆರೆಹಾವಳಿ ಮತ್ತು ಭೂಕಂಪದಿಂದ ರೈತರು ಬೆಳೆದ ಬೆಳೆ ಸಂಪೂರ್ಣವಾಗಿ ನಾಶವಾಗಿರುವುದರ ಬಗ್ಗೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಇಡೀ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಸತತವಾಗಿ ಅತಿವೃಷ್ಟಿ, ನೆರೆಹಾವಳಿ ಮತ್ತು ಭೂಕಂಪದಿಂದ ರೈತರು ಬೆಳೆದಂತಹ ಬೆಳೆ ಸಂಪೂರ್ಣವಾಗಿ ನಾಶವಾಗಿರುವುದು ಸರ್ಕಾರಕ್ಕೆ ಗೊತ್ತಿದೆ. ಸರ್ಕಾರ ಸಹ ಅಕ್ಟೋಬರ್ 93ರಂದು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಮೆಮೊರ್ಯಾಂಡಮ್ ಕಳುಹಿಸಿ ಕೊಟ್ಟು ಸುಮಾರು 200 ಕೋಟಿ ರೂಪಾಯಿ ಪರಿಹಾರವನ್ನು ಬೆಳೆ ನಷ್ಟವಾಗಿರುವುದಕ್ಕೆ

ಕೊಡಬೇಕೆಂದು ವಿನಂತಿ ಮಾಡಿರುವುದು ತಮಗೆ ಗೊತ್ತಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲೂ ಸಹ ಅತ್ಯಂತ ಪ್ರಾಮುಖ್ಯವಾಗಿ ಇದಕ್ಕೆ ಒತ್ತನ್ನು ಕೊಟ್ಟು ಅತಿವೃಷ್ಟಿ, ನೆರೆ ಹಾವಳಿ ಮತ್ತು ಭೂಕಂಪದಿಂದ ರೈತನ ಪರಿಸ್ಥಿತಿ ಏನಾಗಿದೆ ಅದನ್ನು ರಾಜ್ಯಪಾಲರ ಬಾಯಿಂದ ಹೇಳಿಸಿದ್ದಾರೆ. ಇಂತಹ ದಯನೀಯ ಪರಿಸ್ಥಿತಿ ಇವತ್ತು ರಾಜ್ಯದಲ್ಲಿರಬೇಕಾದರೆ ತಮ್ಮ ರಾಜ್ಯಪಾಲರ ಭಾಷಣದಲ್ಲಿ ತಿಳಿಸಿರುವಂತೆ ರಾಜ್ಯದಲ್ಲಿ 9 ಜಿಲ್ಲೆಗಳಲ್ಲಿ ಅಂದರೆ ಬೀದರ್, ಬಿಜಾಪುರ, ಗುಲ್ಬರ್ಗ, ಬೆಳಗಾಂ, ರಾಯಚೂರು, ಶಿವಮೊಗ್ಗ, ಧಾರವಾಡ, ಬಳ್ಳಾರಿ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸುಮಾರು 500 ಕೋಟಿ ರೂಪಾಯಿಗಳಷ್ಟು ಬೆಳೆ 1993-94ನೇ ಸಾಲಿನಲ್ಲಿ ನಷ್ಟವಾಗಿರುವುದು ನಿಮಗೆ ಗೊತ್ತಿರುವ ಸಂಗತಿ. ಅತಿವೃಷ್ಟಿ ಮತ್ತು ನೆರೆಹಾವಳಿಯಿಂದ ನಷ್ಟವಾಗಿರುವುದು ತಮಗೆ ತಿಳಿದಿದೆ. ಇಂತಹ ವಿಶೇಷವಾದ ಪರಿಸ್ಥಿತಿ ಇರಬೇಕಾದರೆ ರಾಯಚೂರು ಜಿಲ್ಲೆ ಒಂದೇ ಒಂದು ಕಡೆ ಸುಮಾರು 100 ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಸೂರ್ಯಕಾಂತಿ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಒಂದು ಪೈಸೆ ಕೂಡ ಇದುವರೆಗೆ ಅವರಿಗೆ ಪರಿಹಾರವನ್ನು ಕೊಟ್ಟಿಲ್ಲ. ಸಾವಿರಾರು ಜನ 1 ತಿಂಗಳು ಧರಣಿ ಕುಳಿತು ಚಳುವಳಿ ಮಾಡಿರುವುದು ತಮಗೆ ಗೊತ್ತಿರುವ ವಿಚಾರ. ಬಳ್ಳಾರಿ ಜಿಲ್ಲೆಯಲ್ಲಿ ಹತ್ತಿ ಬೆಳೆ ಸಂಪೂರ್ಣವಾಗಿ ನಾಶವಾಗಿ ಅದರಿಂದ 50 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ತೊಗರಿಬೇಳೆ ನಾಶವಾಗಿ ಸುಮಾರು ನಾಲ್ಕೈದು ಕೋಟಿ ರೂಪಾಯಿಗಳವರೆಗೆ ಪರಿಹಾರ ಕೊಡಲಾಗಿದೆ. ಇನ್ನೂ 2 ಕೋಟಿ ರೂಪಾಯಿಗಳಷ್ಟು ಪರಿಹಾರ ಕೊಡಬೇಕೆಂದು ಸತ್ಯಾಗ್ರಹ ಚಳುವಳಿ ನಡೆಯುತ್ತಿದೆ. ಇಂತಹ ಒಂದು ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿರಬೇಕಾದರೆ, ರೈತ ಬೆಳೆದಂತಹ ಬೆಳೆ ಅವನ ಕೈಗೆ ಸಿಗದೆ ಅವನು ಎರಡು ಹೊತ್ತು ಗಂಜಿಗೋಸ್ಕರ ಪರಿತಪಿಸುತ್ತಿರುವಾಗ, ಬಿತ್ತನೆ ಬೀಜಗಳಿಗೆ ಬೀದಿ ಬೀದಿ ಅಲೆಯುವಂತಹ ಪರಿಸ್ಥಿತಿ ಇರುವಂತಹ ಸಂದರ್ಭದಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಮೂಲಕ ಬಲಾತ್ಕಾರವಾಗಿ ನೋಟೀಸ್‌ಗಳನ್ನು ಕೊಡಿಸುವ ಮೂಲಕ ಅವನ ಮನೆಮಠ ಜಪ್ತಿ ಮಾಡುವ ಕೆಲಸ ಎಲ್ಲ ಕಡೆ ಪ್ರಾರಂಭವಾಗಿದೆ. ಬೆಳೆ ಸಾಲ ಕೊಡದಿರುವ ರೈತರ ಮೇಲೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮೂಲಕ ಕೇಸುಗಳನ್ನು ಬುಕ್ ಮಾಡಿದ್ದಾರೆ. ಈಗ ಇನ್ನೊಂದು ಸೂಚನೆ ಹೋಗಿದೆ. ಅದೇನೆಂದರೆ, ಅವರ ಜಮೀನುಗಳನ್ನು ಹರಾಜು ಹಾಕಿದಂತಹ ಸಂದರ್ಭಗಳಲ್ಲಿ ಅದನ್ನು ಕೊಂಡು ಕೊಳ್ಳುವುದಕ್ಕೆ ಯಾರೂ ಬರದಿದ್ದ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಆ ಜಮೀನುಗಳನ್ನು ಕೊಂಡು ಕೊಂಡು ಅದನ್ನು ಬೇರೆ ಜನರಿಗೆ ವಿತರಣೆ ಮಾಡುವಂತಹ ಯೋಚನೆ ಮಾಡುವ ಮಟ್ಟಕ್ಕೆ ಇವತ್ತು ಸರ್ಕಾರ ಬಂದಿದೆ. ಇಂತಹ ಒಂದು ದಯಾನೀಯ ಪರಿಸ್ಥಿತಿ ಇರುವುದನ್ನು ಮುಖ್ಯಮಂತ್ರಿಗಳು ಒಪ್ಪಿಕೊಂಡು, ರಾಜ್ಯದಲ್ಲಿ ರೈತನ ಸಹಕಾರ ಸಂಘಗಳ ಸಾಲವನ್ನು ಮನ್ನಾ ಮಾಡುವುದಕ್ಕೆ ಏನು ಮಾಡಬಹುದೆಂದು ಚರ್ಚಿಸಲು ವಿರೋಧಪಕ್ಷಗಳ ನಾಯಕರ ಒಂದು ಸಭೆಯನ್ನು ಕರೆದಿದ್ದರು. ಆಗ ನಾವು ನಮ್ಮ ಒಮ್ಮತದ ಅಭಿಪ್ರಾಯವನ್ನು ಕೊಟ್ಟಿದ್ದೇವೆ. ಕೊನೆಗೆ ಒಂದು ರೀತಿಯ ತೀರ್ಮಾನಕ್ಕೆ ಬಂದಿದ್ದಾರೆ. ಈ ರೀತಿ ವಿಚಿತ್ರವಾದ ಪರಿಸ್ಥಿತಿ ಇರಬೇಕಾದರೆ ಬೆಳೆ ಸಾಲ ತೆಗೆದುಕೊಂಡಿರುವವರನ್ನು ಸಣ್ಣ ರೈತ, ದೊಡ್ಡ ರೈತ ಎಂದು ಭೇದಭಾವ ಮಾಡದೆ ಎಲ್ಲ ರೈತರ ಸಹಕಾರಸಂಘಗಳ ಸಾಲದ ಮೇಲಿನ ಬಡ್ಡಿಯನ್ನು ಮನ್ನಾಮಾಡಿ ಅಸಲನ್ನು ಕಟ್ಟಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾವು ವಿನಂತಿ ಮಾಡಿದ್ದೇವೆ.

ಹಿಂದೆ ನಡೆದ ಶಾಸನಸಭೆಯಲ್ಲಿ ಅಧಿವೇಶನದಲ್ಲಿ ಅದನ್ನು ಘೋಷಣೆ ಮಾಡುತ್ತೇನೆಂದು ಹೇಳಿದರು; ಆದರೆ ಅದು ಆಗಲಿಲ್ಲ. ಈಗ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಒಪ್ಪಿಕೊಂಡಿರಬೇಕಾದರೆ ರೈತ ಸಾಲ ಕಟ್ಟುವುದಕ್ಕೆ ಆಗದಿರುವ ದಯಾನೀಯ ಪರಿಸ್ಥಿತಿಯಲ್ಲಿರುವಾಗ, ಅಂತಹ ಶೋಚನೀಯವಾದ ಪರಿಸ್ಥಿತಿಯಲ್ಲಿರುವಾಗ ನಾನು

ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಕೊನೆಯ ಪಕ್ಷ ಇನ್ನು ಮುಂದೆ ಸಾಲ ಮನ್ನಾ ಮಾಡುವುದಕ್ಕೆ ಆಗದಿರುವಂತ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದ್ದರೆ, ಎಲ್ಲ ವಿರೋಧಪಕ್ಷಗಳ ನಾಯಕರು ನಿಮ್ಮ ಮನಸ್ಸನ್ನು ಒಲಿಸಿದಂತೆ ನಿಮಗೆ ಮನದಟ್ಟು ಮಾಡಿರುವಂತೆ ಕೊನೆಯ ಪಕ್ಷ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಸಣ್ಣ ರೈತರು ದೊಡ್ಡ ರೈತರು ಎಂದು ಭೇದಭಾವ ಮಾಡದೆ ಅದನ್ನು ಮನ್ನಾಮಾಡಿ ಅಸಲನ್ನು ಕಟ್ಟುವುದಕ್ಕೆ ಕಾಲಾವಕಾಶ ಮಾಡಿಕೊಡಬೇಕೆಂದು ಒಕ್ಕೊರಲಿನ ವಿನಂತಿ ಮಾಡಿದೆವು. ಈ ದಿಕ್ಕಿನಲ್ಲಿ ಈ ವಿಚಾರದಲ್ಲಿ ಸದನಕ್ಕೆ ಒಂದು ಘೋಷಣೆ ಮಾಡುತ್ತೇನೆಂದು ಹೇಳಿದರು. ಆವೊತ್ತು ಸದನದಲ್ಲಿ ಧರಣಿ ಸತ್ಯಾಗ್ರಹ ಮಾಡಿ, ಅದನ್ನು ವಾಪಸ್ಸು ತೆಗೆದುಕೊಂಡಿರತಕ್ಕದ್ದು ತಮಗೆ ಗೊತ್ತಿರುವ ಸಂಗತಿ. ಇಂತಹ ಒಂದು ವಿಚಿತ್ರವಾದ ಪರಿಸ್ಥಿತಿ ಇರುವಂತಹ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಕೊನೆಯ ಪಕ್ಷ ಈ ರೈತರು ಸಹಕಾರ ಸಂಘಗಳಲ್ಲಿ ಪಡೆದಿರತಕ್ಕ ಬೆಳೆ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಸಂಪೂರ್ಣವಾಗಿ ಸರ್ಕಾರ ಮನ್ನಾ ಮಾಡಬೇಕು. ಬಲಾತ್ಕಾರವಾಗಿ ಸಾಲ ವಸೂಲಾತಿ ಏನು ನಡೆಯುತ್ತಿದೆ ಅದನ್ನು ನಿಲ್ಲಿಸಬೇಕು. ಮನೆ ಮಠ ಜಪ್ತಿ ಮಾಡುವ ಕೆಲಸ ಏನು ನಡೆಯುತ್ತಿದೆ ಅದನ್ನು ನಿಲ್ಲಿಸಬೇಕು. ಬೆಳೆ ಸಾಲ ಕೊಡದಿರುವವರ ಮೇಲೆ ಅಸಿಸ್ಟೆಂಟ್ ರಿಜಿಸ್ಟ್ರಾರ್ರವರ ಮೂಲಕ ಕೇಸುಗಳನ್ನು ಹಾಕುತ್ತಿದ್ದಾರೆ. ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದರೆ ನೂರು ರೂಪಾಯಿಗಳನ್ನು ದಂಡದ ರೂಪದಲ್ಲಿ ಕೊಡಬೇಕಾಗುತ್ತದೆ. 10 ಸಾವಿರ ರೂಪಾಯಿಗೆ ಸ್ಟಾಂಪ್ ಫೀಸ್, ಬಡ್ಡಿ, ಸುಸ್ತಿ ಬಡ್ಡಿ ಎಲ್ಲ ಸೇರಿ 10 ಸಾವಿರ ರೂಪಾಯಿ ಆಗುತ್ತದೆ. ಅಂತಹ ಒಂದು ವಿಚಿತ್ರವಾದ ಸನ್ನಿವೇಶವನ್ನು ರೈತ ಎದುರಿಸುತ್ತಿದ್ದಾನೆ. ಅದಕ್ಕಾಗಿ ನಾನು ಹಿರಿಯ ಸಚಿವರಾದ ರಂಗನಾಥ್ರವರು ಇಲ್ಲಿ ಕುಳಿತಿರುವ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳುವುದು ಏನೆಂದರೆ, ಅತಿವೃಷ್ಟಿ, ನೆರೆಹಾವಳಿ ಮತ್ತು ಭೂಕಂಪದ ಸಂಕಷ್ಟಕ್ಕೆ ರೈತ ಸಿಕ್ಕಿದ್ದಾನೆಂದು ನೀವೇ ಒಪ್ಪಿಕೊಂಡು ಈಗಾಗಲೇ ಕೇಂದ್ರಸರ್ಕಾರಕ್ಕೆ 200 ಕೋಟಿ ರೂಪಾಯಿ ಪರಿಹಾರ ಕೊಡಬೇಕೆನ್ನುವ ವಿನಂತಿಯನ್ನು ತಾವು ಮಾಡಿದ್ದೀರಿ. ನಿಮ್ಮ ಕೃಷಿ ಇಲಾಖೆಯ ಅಂದಾಜಿನ ಪ್ರಕಾರ ಈ ವರ್ಷ ಸುಮಾರು 500 ಕೋಟಿ ರೂಪಾಯಿಗಳಷ್ಟು ಬೆಳೆದು ನಿಂತ ಬೆಳೆ ಸಂಪೂರ್ಣವಾಗಿ ನಾಶವಾಗಿದೆ ಅಂದರೆ ಅವನು ಎಲ್ಲಿಂದ ಹಣ ತಂದು ಸಾಲ ಕಟ್ಟುತ್ತಾನೆ? ಬಿತ್ತನೆ ಬೀಜಕ್ಕೆ ಮತ್ತು ಎರಡುಹೊತ್ತು ಗಂಜಿಗೆ ಬೀದಿಯಲ್ಲಿ ನಿಂತಿರುವ ಸಂದರ್ಭದಲ್ಲಿ ಈ ರೀತಿ ಇವರು ಸಾಲವನ್ನು ವಸೂಲಿ ಮಾಡಿದರೆ ಏನಾಗುತ್ತದೆ? ಬಹುಶಃ ಈ ಸದನದಲ್ಲಿರತಕ್ಕ ಎಲ್ಲ ಸದಸ್ಯರಿಗೂ ಇದು ಗೊತ್ತಿರತಕ್ಕ ವಿಚಾರ. ಇಂತಹ ಸಂದರ್ಭದಲ್ಲಿ ನಾನು ವಿನಂತಿ ಮಾಡುತ್ತೇನೆ, ಇವತ್ತು ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಸಚಿವರು ಹೇಳಿಕೆ ನೀಡುವ ಮೂಲಕ ಬಲಾತ್ಕಾರದ ಸಾಲ ವಸೂಲಾತಿಗೆ ತಡೆಯಾಜ್ಞೆ ನೀಡಬೇಕು. ರೈತನ ಬೆಳೆ ಸಾಲದ ಬಾಬ್ತು ಏನು ಬಲಾತ್ಕಾರವಾಗಿ ವಸೂಲಿ ನಡೆಯುತ್ತಿದೆ ಅದನ್ನು ನಿಲ್ಲಿಸಿ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡಿ ಅವನು ಅಸಲನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟು ಅವನು ಗೌರವದಿಂದ ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ನನ್ನ ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪ ಮಾಡಿದ್ದೇನೆ. ಇದೇ ವಿಷಯದ ಬಗ್ಗೆ ಈ ಸದನದಲ್ಲಿ ಕಳೆದ ಎರಡು ವರ್ಷಗಳಿಂದ ಸತತವಾಗಿ ಚರ್ಚೆಯಾಗಿದೆ. ಪಕ್ಷಾತೀತವಾಗಿ ಎಲ್ಲರಿಂದಲೂ ಸಹ ಇದು ಆಗಲೇಬೇಕೆಂಬ ಒತ್ತಾಯವನ್ನು ಈ ಸರ್ಕಾರಕ್ಕೆ ತರುವಂಥ ಪ್ರಯತ್ನ ಆಗಿದೆ. ಒಂದು ಬಾರಿ ನಾವು ಪ್ರಧಾನಿಯವರನ್ನೂ ಹೋಗಿ ಭೇಟಿ ಮಾಡಿದೆವು, ಕೇಂದ್ರದ ಹಣಕಾಸಿನ ಸಚಿವರನ್ನು ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಹೋಗಿ ಭೇಟಿ ಮಾಡಿ, ಸಹಕಾರ ಸಂಘದ ಸಾಲ ಮನ್ನಾ ಯೋಜನೆ ಏನಿದೆ, ಈ ಯೋಜನೆಯಲ್ಲಿರುವ ಅನೇಕ ಷರತ್ತುಗಳಿಂದ ಇದು ರೈತರಿಗೆ ಉಪಯೋಗವಾಗುವುದಿಲ್ಲವೆಂದು, ಕೇಂದ್ರಸರ್ಕಾರದ ಮನವೊಲಿಸುವ ಪ್ರಯತ್ನ ಮಾಡಿದೆವು. ಮುಖ್ಯಮಂತ್ರಿಗಳು ಸಹ ಇದನ್ನು ಪರಿಶೀಲನೆ ಮಾಡುತ್ತೇವೆಂಬ

ಭರವಸೆಯನ್ನು ಕೊಟ್ಟಿದ್ದರು. ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿ ಈ ಸದನಕ್ಕೆ ಬಂದ ಮೊದಲನೇ ದಿವಸ, ಒಂದು ವಾರ ಕಾಲ ಈ ಸಭೆಯಲ್ಲಿ ಕಾರ್ಯಕಲಾಪ ನಡೆಯಲಿಲ್ಲ. ಸಾಲ ವಸೂಲಿಗೆ ತಡೆಯಾಜ್ಞೆಯನ್ನು ಕೊಟ್ಟರು. ಹೀಗಾಗಿ ಕಳೆದ 3-4 ವರ್ಷಗಳಿಂದ ಸಹಕಾರಿ ಸಂಘಗಳಿಂದ ತೆಗೆದುಕೊಂಡ ಸಾಲ ಮನ್ನಾ ಆಗಬಹುದು ಎಂದು ಈ ನಾಡಿನ ರೈತ ನಂಬಿಕೊಂಡು, ಇವತ್ತು ಅವನು ಪಡೆದ ಸಾಲ ಕಟ್ಟಿಲ್ಲ, ಸಾಲ ಕಟ್ಟುವಂಥ ಸ್ಥಿತಿ ಇಲ್ಲ. 10 ಸಾವಿರಕ್ಕೆ, 10 ಸಾವಿರ ಬಡ್ಡಿಯಾಗಿ, ಮನೆ ಮಠವನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ಬಂದಿದೆ. ಅದಕ್ಕಾಗಿ ನಾನು ಸರ್ಕಾರದಿಂದ ಸ್ಪಷ್ಟವಾದಂಥ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇನೆ. ಈ ಬಲಾತ್ಕಾರದ ಸಾಲ ವಸೂಲಿ ನಿಲ್ಲಬೇಕು, ಅಸಿಸ್ಟೆಂಟ್ ರಿಜಿಸ್ಟ್ರಾರ್ ಕೇಸುಗಳನ್ನು ಹಾಕುವಂಥಾದ್ದು ಏನಿದೆ, ಇದನ್ನು ಈಗಲೇ ತಡೆಹಿಡಿಯಬೇಕು. ಕೊನೇಪಕ್ಷ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿ, ಅವರ ನೆರವಿಗೆ ಸರ್ಕಾರ ಮುಂದೆ ಬರಬೇಕೆಂಬ ಒತ್ತಾಯವನ್ನು ನಾನು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ಯಾವ ಒಂದು ಮನವಿಯನ್ನು ಕೇಂದ್ರಕ್ಕೆ ಕೊಟ್ಟಿದ್ದಾರೆ, ಮೆಮೋರ್ಯಾಂಡಂ ಕಳುಹಿಸಿದ್ದಾರೆ ಅದರಲ್ಲಿರುವಂತೆ ಬಹಳ ಸ್ಪಷ್ಟವಾಗಿ, ಸುಮಾರು 11 ಜಿಲ್ಲೆಗಳಲ್ಲಿ ಸರ್ಕಾರವೇ ಒಪ್ಪಿಕೊಂಡಿರುವ ಪ್ರಕಾರ ಸುಮಾರು 219 ಕೋಟಿ ರೂಪಾಯಿಗಳಷ್ಟು ಬೆಳೆ ನಾಶವಾಗಿದೆ. ಸುಮಾರು 3 ಲಕ್ಷ ಹೆಕ್ಟೇರ್ ಜಮೀನಿನಲ್ಲಿ ಈ ವರ್ಷ ಬೆಳೆದುನಿಂತ ಬೆಳೆ, ಸಂಪೂರ್ಣವಾಗಿ ನಾಶವಾಗಿದೆ. ಅವನು ಗೊಬ್ಬರ ಹಾಕಿ, ಬಿತ್ತನೆ ಮಾಡಿ, ಇನ್ನೇನು ಬೆಳೆ ಕೈಗೆ ಸಿಗಬೇಕು ಎನ್ನುವಂಥ ಕಾಲದಲ್ಲಿ, ಅವನು ದಯನೀಯ ಪರಿಸ್ಥಿತಿಯಲ್ಲಿದ್ದಾನೆ. ನಾನು ರಾಯಚೂರು ಜಿಲ್ಲೆಗೆ ಹೋಗಿದ್ದೆ. ಸನ್ಯಾಸ್ಯ ರಂಗನಾಥ್ರವರಿಗೆ ಗೊತ್ತಿರಬಹುದು. ಅಲ್ಲಿ ಬೆಳೆದಂಥ ಸುಮಾರು 100 ಕೋಟಿ ಬೆಲೆ ಬಾಳುವಂಥ ಸೂರ್ಯಕಾಂತಿಯನ್ನು ಅವನು ಕಟಾವು ಮಾಡುವಂಥ ಸಂದರ್ಭದಲ್ಲಿ ಅತಿವೃಷ್ಟಿಗೆ ಸಿಕ್ಕಿ ಸಂಪೂರ್ಣ ನಾಶವಾಗಿ, ಮಾರ್ಕೆಟ್ಟಿಗೆ ಬಂದಾಗ ಕ್ವಿಂಟಾಲ್ಗೆ ಸುಮಾರು 25-30 ರೂಪಾಯಿ ಕೂಡ ಬೆಲೆ ಸಿಗದೆ, ಮಾರ್ಕೆಟ್ನಲ್ಲಿ ಹಾಗೆಯೇ ಬಿಟ್ಟುಹೋದಂಥ ದಯನೀಯ ಪರಿಸ್ಥಿತಿ ಬಂದಿರುವಂಥಾದ್ದು ಕೃಷಿ ಇಲಾಖೆ ಮೂಲಕ ತಮಗೆ ವರದಿ ಬಂದಿರಬಹುದು ಎಂದು ನಾನು ಭಾವಿಸಿದ್ದೇನೆ.

ಈ ರೀತಿ ಕರ್ನಾಟಕ ರಾಜ್ಯದ ಬಹುತೇಕ ಎಲ್ಲ ಕಡೆ ರೈತರು ಅತಿವೃಷ್ಟಿ, ನೆರೆ ಹಾವಳಿ, ಭೂಕಂಪಕ್ಕೆ ಒಳಗಾಗಿದ್ದಾರೆ. ಹಿಂದಿನ ಎರಡು ವರ್ಷ, ವಿಚಿತ್ರವಾದ ಬರಗಾಲಕ್ಕೆ ನಮ್ಮ ರಾಜ್ಯದ ರೈತ ತುತ್ತಾಗಿದ್ದಾನೆ. ಅವತ್ತು ಮುಖ್ಯಮಂತ್ರಿಗಳಾಗಿದ್ದಂಥ ಸನ್ಯಾಸ್ಯ ಬಂಗಾರಪ್ಪನವರು ಇರಬಹುದು, ಸದನದಲ್ಲಿ ಪಕ್ಷಾತೀತವಾಗಿ ನಾವೆಲ್ಲರೂ ಸಹ ನಾಡಿನ ಜನರಿಗಾಗಿ ಹೋರಾಟ ಮಾಡಿದೆವು. ನೀವು ಸಾಲ ಮನ್ನಾ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದಿರಿ, ನಾವು ಹೋರಾಟ ಮಾಡಿದೆವು. ಈ ನಾಡಿನ ಜನ ನಮ್ಮನ್ನು ನಂಬಿಕೊಂಡು ಕುಳಿತಿದ್ದಾರೆ. ಹಣಕಾಸಿನ ಪರಿಸ್ಥಿತಿ ತೀವ್ರ ಹದಗೆಟ್ಟಿದೆ ಎಂದು ತಾವು ಹೇಳುವುದಾದರೆ, ಇದು ಸಾಧ್ಯವೇ ಇಲ್ಲವೆಂದು ತಾವು ಹೇಳುವುದಾದರೆ, ಕೊನೇಪಕ್ಷ, ಈ ಸಹಕಾರಿ ಸಂಘಗಳ ಮೇಲಿರುವಂಥ, ರೈತನ ಸಾಲದ ಮೇಲಿನ ಬಡ್ಡಿ, ಸುಸ್ತಿ ಭಡ್ಡಿಯನ್ನಾದರೂ ಮನ್ನಾ ಮಾಡಬೇಕಾಗುತ್ತದೆ. ಹೋದವರ್ಷ 29 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಗೊಬ್ಬರದ ಸಬ್ಸಿಡಿಗೋಸ್ಕರ ಬಿಡುಗಡೆ ಮಾಡಿತು. ಆದರೆ ಅದರಲ್ಲಿ ಸುಮಾರು 10 ಕೋಟಿ ರೂಪಾಯಿಗಳನ್ನೂ ಆ ಗೊಬ್ಬರದ ಸಬ್ಸಿಡಿಗೆಂದು ಖರ್ಚು ಮಾಡಲಿಲ್ಲ. ಕೇಂದ್ರದಲ್ಲಿ ಸ್ಪಷ್ಟವಾದ ಸೂಚನೆ ಇದೆ. ಈ ಹಣವನ್ನು ರೈತರ ಉಳಿವಿಗೆ ಯಾವ ರೀತಿ ಬೇಕಾದರೂ ಉಪಯೋಗ ಮಾಡಿಕೊಳ್ಳಬಹುದು ಎಂಬ ಸ್ಪಷ್ಟ ಸೂಚನೆ ಇದ್ದಾಗ, ಆ ಕೇಂದ್ರ ಸರ್ಕಾರ ಕೊಟ್ಟಂಥ 29 ಕೋಟಿ, ಇನ್ನುಳಿದಂಥ 60-70 ಕೋಟಿ ರೂಪಾಯಿಗಳನ್ನು ನೀವು ಉಳಿಸಿ, ಇವತ್ತು ಇಡೀ ನಮ್ಮ ರಾಜ್ಯದ ರೈತನ ಸಹಕಾರಿ ಸಂಘಗಳ ಸಾಲದ ಮೇಲಿನ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಿ, ಅವನ ನೆರವಿಗೆ

ತಾವು ಧಾವಿಸಬಹುದಾಗಿತ್ತು. ಅದಕ್ಕಾಗಿ ನಾನು ಒತ್ತಾಯ ಮಾಡುತ್ತಿದ್ದೇನೆ. ದಯಮಾಡಿ, ಈ ನಾಡಿನ ರೈತನ ಹಿತವನ್ನು ತಾವು ಗಮನಿಸಿ, ಈ ಬಲತ್ಕಾರದ ಸಾಲ ವಸೂಲಿಗೆ ತಡೆಯಾಜ್ಞೆಯನ್ನು ನೀಡಬೇಕು. ಮತ್ತೆ ಇವತ್ತು ಕೊನೇಪಕ್ಷ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿ, ಅಸಲು ಕಟ್ಟುವುದಕ್ಕೆ ಅವಕಾಶವನ್ನು ಮಾಡಿಕೊಡುವಂಥ ಒಂದು ದಿಟ್ಟ ನಿಲುವನ್ನು ತಾವು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ ಸಿ. ಬೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೇ, ಈ ಸಹಕಾರ ಸಂಘಗಳ ಸಾಲದ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ. ಈ ಬಗ್ಗೆ ಮೊದಲಿಂದಲೂ ಕೂಡ ನಾವು ಒತ್ತಾಯ ಮಾಡುತ್ತಿದ್ದೇವೆ. ಮಾಡಿರತಕ್ಕ ಸಾಲವನ್ನು ರದ್ದು ಮಾಡುವುದು ಬೇಡ. ಅದಕ್ಕೆ ಸ್ಪಷ್ಟವಾದಂಥ ನನ್ನ ವಿರೋಧವೂ ಕೂಡ ಇದೆ. ಯಾವ ಸಾಲವನ್ನು ಕೂಡ ರದ್ದು ಮಾಡಬಾರದು. ಆದರೆ, ಇವತ್ತಿನದಿವಸ ಅನೇಕ ಕಾರಣಗಳಿಂದ ರೈತರು ಕೆಲವು ಜನರನ್ನು ನಂಬಿ, ಸಾಲ ರದ್ದಾಗುತ್ತದೆ, ರದ್ದಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ಸಾಲ ಕಟ್ಟಿಲ್ಲ. ಅದರಿಂದ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ರದ್ದುಮಾಡಬೇಕೆಂದು ಮೊದಲಿಂದಲೂ ಒಂದೇ ಈ ಎಲ್ಲಾ ಕಡೆಯ ಸದಸ್ಯರ ಒತ್ತಾಯ. ಅದಕ್ಕೆ ಸರ್ಕಾರ ಮುಂದಾಗಬೇಕೆನ್ನುವುದರ ಬಗ್ಗೆ ನಾನೂ ಸಹ ಒತ್ತಾಯಿಸುತ್ತೇನೆ. ಮತ್ತೊಂದು ವಿಚಾರ ಎನೆಂದರೆ ಈ ವಿದ್ಯುತ್ ಬಾಕಿ ಇರತತಾದ್ದರ ಬಗ್ಗೆ ಸಹ, ಸುಸ್ತಿ ಬಡ್ಡಿಯನ್ನು ವಜಾ ಮಾಡಿದ್ದಾರೆ. ಅದೇ ರೀತಿ ಅವಧಿ ಮುಗಿದೆ,.....

ಅಧ್ಯಕ್ಷರು: ಆ ವಿಷಯ ಬೇಡ, ಅದನ್ನು ಬೇರೆ ಸಂದರ್ಭದಲ್ಲಿ ಚರ್ಚೆ ಮಾಡಿ. ಅದಕ್ಕೆ ಬೇರೆ ಪ್ರಸ್ತಾವನೆ ಮಾಡಿ.

ಶ್ರೀ ಸಿ. ಬೈರೇಗೌಡ: ಆ ಅವಧಿಯನ್ನು ಮಾರ್ಚ್ 31ರವರೆಗೂ ವಿಸ್ತರಿಸಬೇಕು ಎಂದು ನನ್ನ ಮನವಿ.

ಅಧ್ಯಕ್ಷರು: ನೀವು ಬರೆದು ಕಳುಹಿಸಿ, ನೀವು ಪ್ರಸ್ತಾವನೆ ಮಾಡುವುದಕ್ಕೆ ಅವಕಾಶವಿದೆ.

12.30 ಪಿ.ಎಂ

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಯಡಿಯೂರಪ್ಪನವರು ಏನು ನಿಲುವಳಿ ಸೂಚನೆ ತಂದಿದ್ದಾರೆ ಈ ಬಗೆಗಿನ ಚರ್ಚೆ ಇದು ಮೊದಲನೇ ಸಲ ಅಲ್ಲ. ಈ ಸದನದಲ್ಲಿ ಅನೇಕ ಬಾರಿ ಚರ್ಚೆಗಳು ನಡೆದಿವೆ. ಈಗಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರಪ್ಪಮೊಯ್ಲಿಯವರು ನಮ್ಮನ್ನೆಲ್ಲಾ ಚರ್ಚೆಗೆ ಕರೆದು ಯಾವುದಾದರೊಂದು ತೀರ್ಮಾನಕ್ಕೆ ಬರೋಣ ಅಂತಹೇಳಿ ಈಗಾಗಲೇ ಒಂದು ವರ್ಷದಾಟಿದರೂ ಇನ್ನೂ ಯಾವುದೂ ತೀರ್ಮಾನಕ್ಕೆ ಬರಲಿಲ್ಲ. ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡುವ ಬಗ್ಗೆ ಕನಿಷ್ಟ ಅಷ್ಟಕ್ಕಾದರೂ ವಜಾ ಮಾಡೋಣ ಎಂದು ಒಂದು ತೀರ್ಮಾನಕ್ಕೆ ಬರೋಣ ಎಂದು ಹೇಳಿ ಇವರು ಖಾಸಗಿಯಾಗಿ ನಮ್ಮನ್ನೆಲ್ಲಾ ಕರೆದು ವಿಧಾನ ಸಭೆಯಲ್ಲಿ ಅಲ್ಲ, ಹೊರಗಡೆ ಮಾತುಕತೆಯಾಡಿ ಏನೋ ಒಂದು ತೀರ್ಮಾನಕ್ಕೆ ಬರೋಣ ಎಂದು ಅವರು ಕೊಟ್ಟಂತಹ ಭರವಸೆಯನ್ನು ಇದುವರೆಗೂ ಈಡೇರಿಸಲಿಲ್ಲ. ಕರೆದು ಅನೌನ್ಸ್ ಮಾಡಿದರು. ಕರೆದು ಹೇಳಿ ಇವತ್ತಿನವರೆಗೂ ಮಾಡಲಿಲ್ಲ. ಅತಿವೃಷ್ಟಿ ಮತ್ತು ಅನಾವೃಷ್ಟಿ ಬಗ್ಗೆ ಕೇಂದ್ರ ಸರ್ಕಾರಕ್ಕೆ 91-92-93..

ಅಧ್ಯಕ್ಷರು: ಆ ವಿಷಯವನ್ನು ನಾನು ನಾಳೆ ನಾಳಿದ್ದು ತೆಗೆದುಕೊಳ್ಳುತ್ತೇನೆ. ಅತಿವೃಷ್ಟಿ ಮತ್ತು ಅನಾವೃಷ್ಟಿ ಬಗ್ಗೆ ನಾನು ದಿನಾಂಕ ನಿಗದಿ ಮಾಡಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ತಾವು ಅವಕಾಶ ಕೊಡುತ್ತೀರಿ ಮತ್ತು ಸ್ಪಷ್ಟವಾಗಿ ಸರ್ಕಾರ ನಿರ್ಧಾರಕ್ಕೆಗೊಳ್ಳಬೇಕು. ಈಗ ರೈತರ ಮನೆಗಳು ಏನು ಹರಾಜಿ ಬಂದಿವೆ ಇದನ್ನು ಕೂಡಲೇ ನಿಲ್ಲಿಸುವುದಕ್ಕೆ ತಕ್ಷಣ ಸರ್ಕಾರ ಒಂದು ಆದೇಶ ಹೊರಡಿಸಬೇಕು ಎಂದು ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ ಸ್ವಾಮಿ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೇ, ನಾನು ಈ ನಿಲುವಳಿ ಸೂಚನೆಗೆ ಸಹಿ ಮಾಡಿದ್ದೇನೆ. ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ನಾನು ಹೇಳುವುದು ಇಷ್ಟೇ; ನಾನು ಒಂದು ಹಳ್ಳಿಗೆ ಹೋಗಿದ್ದೆ. ಆ ಹಳ್ಳಿಯಲ್ಲಿ ಅವರಿಗೆ ತಿನ್ನುವುದಕ್ಕೆ ಅನ್ನ ಇಲ್ಲ ಈ ನೆರೆ ಹಾವಳಿ ಮತ್ತು ಅತಿವೃಷ್ಟಿಯಿಂದ ತಿನ್ನುವುದಕ್ಕೆ ಅನ್ನ ಇಲ್ಲ. ಅಂತಹವರಿಗೆ ಹಣ ಕಟ್ಟಿ ಎಂದು ಬಂದಿರುವ ನೋಟೀಸ್ ತೋರಿಸುತ್ತಿದ್ದಾರೆ. 5 ಪರ್ಸೆಂಟ್ ಹಣ ಬಡ್ಡಿ ಮನ್ನಾ ಮಾಡುತ್ತೇನೆಂದು ಮುಖ್ಯಮಂತ್ರಿಗಳು 3 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರೆ. ಆದರೆ ಸಣ್ಣ ರೈತರು ದೊಡ್ಡ ರೈತರು ಎಂದು ಹೇಳಿ ತಾರತಮ್ಯ ಮಾಡುವಂತಹ ಒಂದು ಪ್ರಯತ್ನ ನಡೆಯುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರನ್ನು ಕರೆದು ಬಡ್ಡಿ ಮನ್ನಾ ಮಾಡುತ್ತೇವೆಂದು ಒಪ್ಪಿಕೊಂಡು ಇಲ್ಲಿ ಬಂದು 5 ಪರ್ಸೆಂಟ್ ಎಂದು ಹೇಳಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅಂತ ಘೋಷಣೆ ಮಾಡಿ ಹೋದರು. ಅದಕ್ಕೆ ನಾವು ವಾಕ್ ಔಟ್ ಮಾಡಿ ಹೋದೆವು. ಈಗ 5 ಸಾವಿರಕ್ಕೆ 10 ಸಾವಿರಕ್ಕೆ ಅವರ ಮನೆ ಹರಾಜಿಗೆ ಬಂದಿದೆ ಎಂದು ಹೇಳಿ ಹರಾಜಿಗೆ ಡೇಟ್ ಫಿಕ್ಸ್ ಮಾಡಿದ್ದಾರೆ ಇಡೀ ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಇದೇ ರೀತಿ ಒಂದು ಪರಿಸ್ಥಿತಿ ಇದೆ ಸ್ವಾಮಿ. ಸರ್ಕಾರ ಬೆಳೆ ನಾಶವಾಗಿದೆ ಎಂದು ಒಪ್ಪಿಕೊಳ್ಳುತ್ತದೆ. ಹತ್ತಾರು ಸಾವಿರ ರೂಪಾಯಿಗಳನ್ನು ಎಕರೆಗೆ ಖರ್ಚುಮಾಡಿ 365 ದಿನ ದುಡಿದು ಅತಿವೃಷ್ಟಿ ಮತ್ತು ಅನಾವೃಷ್ಟಿಗೆ ತುತ್ತಾದ ರೈತ ಯಾವ ರೀತಿ ಸಾಲಕ್ಕೆ ಜವಾಬ್ದಾರನಾಗುತ್ತಾನೆ ಸ್ವಾಮಿ. ಇದಕ್ಕಾಗಿ ನಾನು ಹೇಳುತ್ತೇನೆ, ಪಕ್ಷಾತೀತವಾಗಿ ಇಡೀ ಸದನದಲ್ಲಿ ಎಲ್ಲಾ ರೈತರನ್ನು ಕಾಡುತ್ತಿರುವ ಪ್ರಶ್ನೆ ಇದು. ಎಲ್ಲಾ ಸದಸ್ಯರನ್ನು ಕಿತ್ತು ತಿನ್ನುತ್ತಿರತಕ್ಕಂಥ ಪ್ರಶ್ನೆ ಇದು. ಇದು ಯಾವುದೋ ಒಂದು ಪಕ್ಷದ ಒಬ್ಬ ವ್ಯಕ್ತಿಯ ಪ್ರಶ್ನೆ ಅಲ್ಲ, ಒಂದು ಬಾರಿ ಈ ರಿಯಾಯತಿಯನ್ನು ಕೊಟ್ಟು ಇವತ್ತು ರೈತರನ್ನು ಉಳಿಸುವಂತಹ ಒಂದು ಪ್ರಯತ್ನವನ್ನು ಸರ್ಕಾರ ಪ್ರಕಟ ಮಾಡಬೇಕಾಗುತ್ತದೆ. ಈ ಬಗ್ಗೆ ಸರ್ಕಾರ ಏನು ಹೇಳುತ್ತೋ ಕೇಳೋಣ.

ಶ್ರೀ ಕೆ.ಎಸ್. ಈಶ್ವರಪ್ಪ: ರಾಜ್ಯಪಾಲರ ಭಾಷಣದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ರೈತ ನಿರ್ನಾಮ ಆಗಿದ್ದಾನೆಂದು ಸರ್ಕಾರ ಸ್ಪಷ್ಟವಾಗಿ ಹೇಳಿದೆ. ಇದು ಗೊತ್ತಿದ್ದು ಕೂಡ ಈ ರೀತಿ ಮತ್ತೆ ಮತ್ತೆ ನೋಟೀಸ್ ಕೊಟ್ಟು ಮಾಡುವುದರಿಂದ ಅವರು ಬದುಕಬೇಕಾ ಸಾಯಬೇಕಾ ಎಂದು ತಾವು ಹೇಳಿ. ಸರ್ಕಾರಕ್ಕೆ ಇದು ಸ್ಪಷ್ಟವಾಗಿ ಗೊತ್ತಿದೆ ರೈತ ತುಂಬಾ ತೊಂದರೆ ಅನುಭವಿಸುತ್ತಿದ್ದಾನೆ. ಅವರಿಗೆ ತಿನ್ನಲು ಅನ್ನ ಇಲ್ಲ ಉಡಲು ಬಟ್ಟೆ ಇಲ್ಲ; ಬೆಳೆ ಸಂಪೂರ್ಣವಾಗಿ ನಾಶವಾಗಿ ಹೋಗಿದೆ, ಅವನಿಗೆ ನೀರು ಇಲ್ಲ ಬಿತ್ತನೆ ಬೀಜಕ್ಕೆ ಹಣ ಇಲ್ಲ, ಇವೆಲ್ಲಾ ಗೊತ್ತಿದ್ದೂ ಕೂಡ ಹಣ ಕಟ್ಟಿ ಹಣ ಕಟ್ಟಿ, ಇಲ್ಲದಿದ್ದರೆ ನಿಮ್ಮ ಪಾತ್ರೆ ಪಡಗ ಎಲ್ಲಾ ಹರಾಜು ಹಾಕುತ್ತೇವೆಂದು ಹೇಳುತ್ತಿದ್ದಾರೆ. ಹರಾಜು ಡೇಟ್ ಫಿಕ್ಸ್ ಆಗಿದೆ. ಆದ ಕಾರಣ ಸರ್ಕಾರ ಒಂದು ಸ್ಪಷ್ಟ ಮಾಡಬೇಕು. ಏನೆಂದರೆ ರೈತರ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡುತ್ತೇವೆ. ಅವರಿಗೆ ಅನುಕೂಲ ಮಾಡುತ್ತವೆ ಎಂದು ಹೇಳಬೇಕು.

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್ (ಕಿತ್ತೂರು): ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಹೊಸ ಪದ್ಧತಿ ಪ್ರಾರಂಭವಾಗಿದೆ. ಅದೇನೆಂದರೆ ಭತ್ತದ ಕಣಕ್ಕೆ ಸೀಲು ಹಾಕಿಸುವುದು. ಇದು ಕೋರ್ಟಿನಿಂದ ಆಗಿದೆ. ಸಹಕಾರ ಸಂಘದವರು ಕೋರ್ಟಿಗೆ ಹೋಗಿ ರೈತನ ಭತ್ತ ಸೀಲು ಮಾಡಿಸುವುದು. ಅಂದರೆ ಕೆಲವು ರೈತರು ಹಸಿ ಭತ್ತವನ್ನು ಹೂತಿ ಬಿಟ್ಟಿರುತ್ತಾರೆ. ಅದು 20 ದಿವಸ, ಒಂದು ತಿಂಗಳು ಹೋಯಿತು ಅಂದರೆ ಅದು ಎಲ್ಲಾ ಕೊಳೆತು ಗೊಬ್ಬರ ಆಗಿ ಹೋಗುತ್ತದೆ. ಹುಣಸೆವಾಡು ಗ್ರಾಮದಲ್ಲಿ ನಾಲ್ಕು ಭತ್ತದ ಕಣಕ್ಕೆ ಸೀಲು ಮಾಡಿಸಿದ್ದಾರೆ. ರೈತ ಆ ಭತ್ತ ಮಾರಿ ಸಾಲ ತುಂಬಬೇಕು ಅಂತ ಇದ್ದರೂ ಕೂಡ ಅದಕ್ಕೆ ಸರ್ಕಾರ ಅವಕಾಶ ಮಾಡಿ ಕೊಡುತ್ತಿಲ್ಲ. ಇದು ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭವಾಗಿದೆ.

ಶ್ರೀ ಕೆ.ಎಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ನಿಲುವಳಿ ಸೂಚನೆ ತಂದಿದ್ದಾರೆ. ಅಧ್ಯಕ್ಷರು ಅದಕ್ಕೆ ಪ್ರಸ್ತಾಪ ಮಾಡಿ ಹಾಗೆ ಎಂದು ಹೇಳಿದರು. ನ್ಯಾಯವಾಗಿ ನೋಡಿದರೆ ಇದನ್ನು ನಿಲುವಳಿ ಸೂಚನೆಯಲ್ಲಿ ತಂದಿರುವುದರಿಂದ ತಳ್ಳಿ ಹಾಕಿಬಿಡಬೇಕಾಗಿತ್ತು. ಏಕೆಂದರೆ ಕಾನೂನು ಪ್ರಕಾರ ಇದು ನಿಲುವಳಿ ಸೂಚನೆಯಲ್ಲಿ ಬರುವುದೇ ಇಲ್ಲ. ಆದರೆ ಮಾನ್ಯ ಸದಸ್ಯರು..

ಶ್ರೀ ಕೆ.ಎಸ್. ಈಶ್ವರಪ್ಪ: ರೈತ ಸಾಯುತ್ತಿದ್ದಾನೆ. ತಾವು ನೋಡಿದರೆ ತಳ್ಳಿ ಹಾಕಿಬಿಡಬಹುದು ಎಂದು ಹೇಳುತ್ತಿದ್ದೀರಲ್ಲ. ಎಷ್ಟು ಹಗುರವಾಗಿ ಮಂತ್ರಿಗಳಾಗಿ ಮಾತನಾಡುತ್ತಿದ್ದೀರಲ್ಲ, ಇದನ್ನು ಅನುಭವಿಸಿದ್ದೀರಾ ಸ್ವಾಮಿ.

ಶ್ರೀ ಕೆ.ಎಚ್. ರಂಗನಾಥ್: ಎಲ್ಲಾ ವಿಚಾರಗಳೂ ನಿಲುವಳಿ ಸೂಚನೆಯಲ್ಲಿ ಬಂದು ಬಿಡುತ್ತದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ: ಇದು ಬಿ.ಜೆ.ಪಿ.ಗೆ ಮಾನ್ಯ ಯಡಿಯೂರಪ್ಪನಿಗೆ ಮಾತ್ರ ಅನ್ವಯವಾಗುತ್ತದೆಯೇ ಸ್ವಾಮಿ? ಇದು ಬಹಳ ಗಂಭೀರವಾದ ಪ್ರಶ್ನೆ ಆಗಿದೆ. ಕಳೆದ 3 ತಿಂಗಳಿಂದ ಈ ಸದನ ನಡೆದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ನಿಲುವಳಿ ಸೂಚನೆಯನ್ನು ತಳ್ಳಿ ಹಾಕಿಬಿಡಬಹುದು ಎಂದು ಹೇಳುತ್ತೀರಲ್ಲ. ಅಲ್ಲಿ ರೈತ ಸಾಯುತ್ತಿದ್ದಾನೆ.

ಅಧ್ಯಕ್ಷರು: ಸರ್ಕಾರ ಏನು ಹೇಳುತ್ತದೋ ಕೇಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಬಂದಿದ್ದಾರೆ, ಅವರನ್ನು ಕೇಳಿ. ಅವರು ವಿರೋಧ ಪಕ್ಷದ ಮುಖಂಡರುಗಳನ್ನು ನಮ್ಮಗಳನ್ನು ಕರೆದು ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾಮಾಡುವ ಬಗ್ಗೆ ಹೇಳಿದ್ದರು. ಅವರ ಭರವಸೆ ಏನು ಆಯಿತು. ಅವರು ಇದುವರೆಗೂ ಏನು ಮಾಡಿದ್ದಾರೆಂದು ಹೇಳಲಿ ಸ್ವಾಮಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಅಧಿಕಾರಿಗಳನ್ನು, ಎಲ್ಲಾ ವಿರೋಧಪಕ್ಷದ ಸದಸ್ಯರನ್ನು ಕರೆದು ಸಾಲ ಮನ್ನಾ ಮಾಡುವುದಕ್ಕೆ ಆಗುವುದಿಲ್ಲ ನೀವು ಯಾವುದೇ ಒಂದು ಪ್ರಸ್ತಾಪವನ್ನು ಮಾಡಕೂಡದು, ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡುವುದಕ್ಕೆ ಸ್ಪಷ್ಟವಾದಂತಹ ನಿರ್ಧಾರವನ್ನು ತೆಗೆದುಕೊಳ್ಳೋಣ ಎಂದು ನಮ್ಮನ್ನೆಲ್ಲಾ ಕರೆದು ಚರ್ಚೆ ಮಾಡಿದರು. ಇದನ್ನು ಜಾರಿಗೆ ತಂದರೆ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಖರ್ಚು ಬರುತ್ತೆ, ಭಾರ ಎಷ್ಟು ಆಗುತ್ತದೆ ಎಂದು ಇದರ ಬಗ್ಗೆ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿದರು. ಆದರೆ ಮುಖ್ಯಮಂತ್ರಿಗಳು

ಘೋಷಣೆ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಿದ್ದಾರೆ. ಅವರು ಕೊಟ್ಟ ಭರವಸೆ ಏನಾಯಿತು? ಅವರು ನಮ್ಮನ್ನೆಲ್ಲಾ ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆ. ಇದು ನಮ್ಮ ನಾಲ್ಕು ಜನರ ಪ್ರಶ್ನೆ ಅಲ್ಲ, ಇಡೀ ಕರ್ನಾಟಕ ರಾಜ್ಯದ ಸುಮಾರು ರೈತರ ಬೆಳೆ ಸಂಪೂರ್ಣನಾಶ ಆಗಿದೆ ಎಂದು ನೀವೇ ಒಪ್ಪಿಕೊಂಡಿದ್ದೀರಿ. ಅದಕ್ಕೆ ನೀವೂ ಕಾರಣ ಅಲ್ಲ, ನಾವು ಕಾರಣ ಅಲ್ಲ. ಅವರು ಪ್ರಕೃತಿ ವಿಕೋಪಕ್ಕೆ ತುತ್ತಾಗಿದ್ದಾರೆ. ಈ ಸಮಯದಲ್ಲಿ ತಾವು ರೈತರ ನೆರವಿಗೆ ಬರಬೇಕು. ಯಾವುದೇ ಒಂದು ಡೆವಲಪ್‌ಮೆಂಟ್ ವರ್ಕ್ಸ್ ಇದ್ದರೆ ಅವುಗಳನ್ನು ನಿಲ್ಲಿಸೋಣ. ಬೇಕಾದರೆ ನಾವು ಒಟ್ಟಿಗೆ ಎಲ್ಲರೂ ಕುಳಿತುಕೊಂಡು ಸಲಹೆ ಸಹಕಾರವನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಕೆಲವು ಅಭಿವೃದ್ಧಿ ಕಾರ್ಯಗಳನ್ನು ನಿಲ್ಲಿಸಿಯಾದರೂ ರೈತರನ್ನು ಉಳಿಸುವುದಕ್ಕೋಸ್ಕರ ಸ್ಪಷ್ಟವಾದ ಉತ್ತರವನ್ನು ಮುಖ್ಯಮಂತ್ರಿಗಳು ನೀಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆ ಇದರಲ್ಲಿ ಬರುವುದಿಲ್ಲ ಎಂದು ನಾನು ಏತಕ್ಕೆ ಹೇಳಿದೆ ಎಂದರೆ....

ಶ್ರೀ ವಾಟಾಳ್ ನಾಗರಾಜ್ : ತಾವು ತಾಂತ್ರಿಕವಾಗಿ ಚರ್ಚೆ ಮಾಡುವುದಕ್ಕೆ ಹೋಗಬೇಡಿ. ಸ್ವಾಮಿ, ವಸ್ತುಸ್ಥಿತಿ ನೋಡೋಣ, ಇದು ನಿಲುವಳಿ ಸೂಚನೆಯಲ್ಲಿ ತಂದಿರತಕ್ಕಂಥಾದ್ದು ಸರಿಯೇ ಇಲ್ಲವೇ ಎನ್ನತಕ್ಕಂಥ ವಾದ ಆಮೇಲೆ ಮಾಡೋಣ. ಇವತ್ತು ರೈತರಿಗೆ ಆಗಿರತಕ್ಕಂಥ ವಸ್ತುಸ್ಥಿತಿ ಬಗ್ಗೆ ಸರ್ಕಾರ ಏನು ಹೇಳುತ್ತದೆ ಎನ್ನತಕ್ಕಂಥಾದ್ದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ನಿಮ್ಮ ಉತ್ತರ ಬೇಕು; ಇಲ್ಲದಿದ್ದರೆ ನಾವು ಧರಣಿ ಮಾಡುತ್ತೇವೆ. ನಿಮ್ಮ ಉತ್ತರ ಸ್ಪಷ್ಟವಾಗಿ ಬೇಕು. ತಾವು ಏನು ನಮ್ಮನ್ನು ಕರೆದು ಹೇಳಿದ್ದಿರಿ, ತಾವು ಏನು ನಮಗೆ ಭರವಸೆ ಕೊಟ್ಟಿದ್ದಿರಿ, ರೈತರ ಬಡ್ಡಿ ಮತ್ತು ಸುಸ್ತಿಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದ್ದಿರಿ; ಅದರ ಬಗ್ಗೆ ತಾವು ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ರೂಲ್ಸ್ ಅಂಡ್ ರೆಗ್ಯುಲೇಶನ್ಸ್ ಪ್ರಕಾರ ಇದನ್ನು ನಿಲುವಳಿ ಸೂಚನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ತಾವು ಹೇಳಿದ್ದು ಸರಿ ಎಂದು ನಾನು ಮುಂದಕ್ಕೆ ಹೋಗುತ್ತೇನೆ. ಇಲ್ಲಿ ಪ್ರಶ್ನೆ ಏನು ಇದೆ ಎಂದರೆ, ಕಳೆದ ವರ್ಷದ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಹಾಗೂ ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ತಾವು ಸಹ ಪ್ರಾಮಾಣಿಕವಾಗಿ ಇದನ್ನು ಒಪ್ಪಿಕೊಂಡಿದ್ದೀರಿ. ರೈತ ಬಹಳ ಕಷ್ಟದಲ್ಲಿದ್ದಾನೆ, ಈ ಅತಿವೃಷ್ಟಿ, ನೆರೆ ಹಾವಳಿ, ಬರಗಾಲ-ಇದರಿಂದ ರೈತ ಕಂಗಾಲಾಗಿದ್ದಾನೆ, ಬಹಳ ಕಷ್ಟದಲ್ಲಿದ್ದಾನೆ, ನೂರಾರು ಕೋಟಿ ರೂಪಾಯಿಗಳ ಅವನ ಉತ್ಪಾದನೆ ಹಾಳಾಗಿದೆ, ಬೆಳೆಹಾಳಾಗಿದೆ ಎಂದು ತಾವು ಒಪ್ಪಿಕೊಂಡಿದ್ದೀರಿ. ಇಂತಹ ಪರಿಸ್ಥಿತಿಯಲ್ಲಿ ತಾವೇ ನಮ್ಮನ್ನು ಕರೆಸಿ ಒಂದು ಸಭೆಯನ್ನು ಮಾಡಿ ಸೂಚನೆ ಕೇಳಿದಿರಿ. ನಾವು ಏನು ಹೇಳಿದೆವು ಎಂದರೆ, ಯಾವ ಪ್ರಕಾರ ನಮ್ಮ ಸರ್ಕಾರ ಇದ್ದಾಗ ನಾವೂ ಸಹ ರೈತರಿಗೆ ಹಲವಾರು ರಿಯಾಯತಿಗಳನ್ನು ಕೊಟ್ಟಿವು. ಮಾನ್ಯ ವಿ.ಪಿ. ಸಿಂಗ್‌ರವರು ಇದ್ದಾಗ 10 ಸಾವಿರ ರೂಪಾಯಿಗಳವರೆಗೂ ರಿಯಾಯತಿ ಕೊಟ್ಟಿವು. ಮಾನ್ಯ ರಾಮಕೃಷ್ಣಹೆಗಡೆಯವರು ಇದ್ದಾಗ ಬಡ್ಡಿ ಮನ್ನಾ ಮಾಡಿದ್ದೆವು. 7 ರೂಪಾಯಿ ಬಡ್ಡಿಗೆ ಸಾಲ ಕೊಟ್ಟಿವು. ಹಾಗಾಗಿ ಇದು ಪ್ರತಿ ಸಲ ಮಾಡಬೇಕು ಎಂದು ನಾನು ಹೇಳುತ್ತಿಲ್ಲ. ಅವನು ಬಹಳ ಕಷ್ಟದಲ್ಲಿದ್ದಾನೆ. ತಾವು ಅವರ ಸಹಾಯಕ್ಕೆ ಬರಬೇಕು, ಒಂದು ಬಾರಿ ಬೆಳೆ ಸಾಲ ಮನ್ನಾ ಮಾಡಿ ಎಂದು ಒತ್ತಾಯ ಮಾಡಿದೆವು. ಆದರೆ ತಾವು ಏನು ಹೇಳಿದಿರಿ ಎಂದರೆ ಇಲ್ಲಾ

ಇದು ಬಹಳ ಭಾರ ಬರುತ್ತದೆ, ನಮಗೆ ಕಷ್ಟವಾಗುತ್ತದೆ. ಇಷ್ಟು ಹಣ ನನ್ನ ಕಡೆ ಇಲ್ಲದಿದ್ದರೆ ಇದನ್ನು ನಾನು ಮಾಡುತ್ತಿದ್ದಿ ಎಂದು ಹೇಳಿದಿರಿ. ಆಮೇಲೆ ನಿಮಗೆ ಒಂದು ಸಲಹೆ ಏನು ಬಂತು ಎಂದರೆ ಕನಿಷ್ಟ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡಿ ಎಂದು ಹೇಳಿದೆವು. ಆಗ ನೀವು ಪರಿಶೀಲನೆ ಮಾಡುತ್ತೇನೆಂದು ಹೇಳಿದಿರಿ. ನಿಮಗಿಂತ ಮುಂಚೆ ಬಂಗಾರಪ್ಪನವರು ಮುಖ್ಯಮಂತ್ರಿ ಇದ್ದಾಗ ಎಲ್ಲಾ ಕಡೆ ನಾನು ಸಾಲ ಮನ್ನಾ ಮಾಡುತ್ತೇನೆ, ಸಾಲ ಮನ್ನಾ ಮಾಡುತ್ತೇನೆಂದು ಹೇಳುತ್ತಾ ಹೋದರು. ಆದರೆ ಸಾಲ ಮನ್ನಾ ಮಾಡಲಿಲ್ಲ, ಬಡ್ಡಿ ಮನ್ನಾ ಇಲ್ಲ, ಸುಸ್ತಿ ಬಡ್ಡಿ ಮನ್ನಾ ಇಲ್ಲ. ಅಷ್ಟೇ ಅಲ್ಲ, ಈಗ ನೆರೆ ಹಾವಳಿಯಿಂದ ರೈತ ಕಷ್ಟದಲ್ಲಿದ್ದಾನೆ. ಆದರೆ ಮೊನ್ನೆ ಒಂದು ಸರ್ಕ್ಯುಲರ್ ಹೊರಡಿಸಿದ್ದೀರಿ ಅದರಲ್ಲಿ ರೈತರ ಬೆಳೆ ಹಾಳಾದರೂ ಸಹ 2:3 ರಷ್ಟು ಬೆಳೆ ಹಾಳಾದರೆ ಅವನಿಗೆ ಪರಿಹಾರ ಕೊಡಬೇಕೆಂದು ಹಾಗೂ 11 ಸಾವಿರ ರೂಪಾಯಿಗಳ ಆದಾಯದ ಮಿತಿ ಸಹ ಹಾಕಿದ್ದೀರಿ. ತಮ್ಮ ಉದ್ದೇಶ ಏನು ಇದೆ ಎಂದು ಸ್ಪಷ್ಟವಾಗಿ ಹೇಳಿ. ನಮ್ಮ ಸರ್ಕಾರ ರೈತರ ನೆರವಿಗೆ ಬರುವುದಿಲ್ಲ, ನಾವು ರೈತರಿಗೆ ಏನೂ ಸಹಾಯ ಮಾಡುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳಿಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಮಾಡುವುದಕ್ಕೆ ಸಿದ್ಧರಿದ್ದಾರೆ. ಮಾಡಬೇಡಿ ಎಂದು ಏಕೆ ಹೇಳುತ್ತೀರಿ. ಅಭಿವೃದ್ಧಿ ಕಾರ್ಯ ನಿಂತರೂ ಕೂಡ ಒಂದು 100 ಕೋಟಿ .ರೂಪಾಯಿಗಳು ಇದಕ್ಕೆ ಖರ್ಚಾಗಬಹುದು. ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡುವುದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡಿ ಹೇಳಲಿ.

ಶ್ರೀ ಆರ್.ವಿ. ದೇಶಪಾಂಡೆ : ತಮಗೆ ರೈತರ ಸಮಸ್ಯೆ ಗೊತ್ತಿಲ್ಲ ಎಂದಲ್ಲ. ತಾವು ಒಪ್ಪಿಕೊಂಡಿದ್ದೀರಿ. ಸರ್ಕಾರ ನಿಜವಾದ ಪರಿಸ್ಥಿತಿ ತಿಳಿದುಕೊಂಡು, ಹಲವಾರು ಕಡೆ ತಾವು ಹೋದಾಗ ಘೋಷಣೆ ಮಾಡುತ್ತೀರಿ. ಅಲ್ಲಿ ಒಂದು ಕೋಟಿ ಕೊಡುತ್ತೇನೆ, ಇಲ್ಲಿ ಒಂದು ಕೋಟಿ ಕೊಡುತ್ತೇನೆಂದು ಹೇಳುವಷ್ಟು ದೊಡ್ಡ ಮನಸ್ಸು ನಿಮಗೆ ಇದೆ. ಅದೇ ರೈತನಿಗೋಸ್ಕರ ಆ ಮಾತು ಏತಕ್ಕೆ ನಿಮ್ಮಿಂದ ಬರುತ್ತಿಲ್ಲ; ಹಾಗಾಗಿ ನಾನು ತಮ್ಮನ್ನು ಏನು ವಿನಂತಿ ಮಾಡುತ್ತೇನೆಂದರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಸ್ಥಿತಿ ಸುಧಾರಿಸಿದೆ, ನಮ್ಮ ರೈತರ ಸ್ಥಿತಿಯೂ ಸುಧಾರಿಸಲಿ. ನಾವು ನಿಮ್ಮ ಜೊತೆಯಲ್ಲಿರುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ತಾವು ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ ಎಂದು ಹೇಳಿದ್ದೀರಿ. ರೈತ ಕಷ್ಟದಲ್ಲಿದ್ದಾನೆ, ಅದೂ ತಾವು ಒಪ್ಪಿಕೊಳ್ಳುತ್ತೀರಿ. ಹಾಗಾದರೆ ರೈತರಿಗೆ ಸಹಾಯ ಮಾಡುವುದಕ್ಕೆ ಏನು ತೊಂದರೆ? ಹಾಗಾಗಿ ಸಾಲ ಮನ್ನಾ ಮಾಡಿದರೆ ಬಹಳ ಸಂತೋಷ. ಇಲ್ಲದಿದ್ದರೆ ಬಡ್ಡಿ ಸುಸ್ತಿ ಬಡ್ಡಿ ಆದರೂ ಮನ್ನಾ ಮಾಡಿ ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ಈಗ ನನಗೆ ಕೌನ್ಸಿಲ್ನಲ್ಲಿ ನನ್ನ ಬಿಲ್ ಕೂಡ ಬರುತ್ತಿದೆ, ಅಲ್ಲಿಗೆ ನಾನು ಹೋಗಬೇಕಾಗಿದೆ. ಇದರ ಬಗ್ಗೆ ನಾವು ಏನೇನು ಮಾಡಿದ್ದೇವೆ, ಅತಿವೃಷ್ಟಿ, ಬೆಳೆ ನಾಶದ ವಿಷಯದಲ್ಲಿ ವಿವರವಾದ ವರದಿ ಕೊಡುತ್ತೇವೆ. ಬಹುಶಃ ಅದೆಲ್ಲವನ್ನೂ ನೋಡಿದ ಮೇಲೆ ತಮಗೆ ಅನ್ನಿಸಬಹುದು; ಏನೆಂದರೆ, ಬಹುಶಃ ನಮ್ಮ ಕರ್ನಾಟಕದ ಇತಿಹಾಸದಲ್ಲಿ ಇಷ್ಟು ಹಣ ನಾವು ಪರಿಹಾರ ರೂಪದಲ್ಲಿ ಕೊಟ್ಟದ್ದು ನಿಮಗೆ ಕಾಣಲಿಕ್ಕಿಲ್ಲ, ಅಷ್ಟು ನಾವು ಮಾಡಿದ್ದೇವೆ. ಅಫ್ಕೋರ್ಸ್, ಈ ಸುಸ್ತಿ ಬಡ್ಡಿ ಮನ್ನಾ ಮಾಡುವುದರಲ್ಲಿ ತಾವು ಒತ್ತಾಯ ಮಾಡುತ್ತಿದ್ದೀರಿ. ಆದರೆ ಆ ದಿವಸ ಯಾವುದು ನಾವು ಚರ್ಚೆ ಮಾಡಿದ್ದೇವೆ ಅದರಲ್ಲಿ ಬಹುತೇಕ ಅನುಷ್ಠಾನ ಮಾಡಿದ್ದೇವೆ. ಅದಕ್ಕೆ

ನಾನು ಹೇಳಿದ್ದು, ಕಂದಾಯ ಮಂತ್ರಿಗಳು ಮಧ್ಯಾಹ್ನ ಬರುತ್ತಿದ್ದಾರೆ. ಇದು ರಾಜ್ಯಪಾಲರ ವಂದನಾ ನಿರ್ಣಯದ ಚರ್ಚೆ ಕಾಲದಲ್ಲಿ ಬರುತ್ತದೆ. ಆಗ ಇದನ್ನು ಚರ್ಚೆ ಮಾಡಬಹುದು. ಪ್ರತ್ಯೇಕವಾಗಿ ನಿಮಗೆ ಅವಕಾಶ ಕೊಡುವುದಕ್ಕೂ ನಾವು ಸಿದ್ಧರಿದ್ದೇವೆ. ಆದರೆ ಇದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಹಾಗಾದರೆ ಇಮ್ಮಿಡಿಯೇಟಾಗಿ ಬಲಾತ್ಕಾರದ ಸಾಲ ವಸೂಲಿ ನಿಲ್ಲಿಸಿ; ಹಾಗೆ ಸೂಚನೆ ಕೊಡಿ.

ಶ್ರೀ ವಾಟಾಳ್ ನಾಗರಾಜ್: ತಾವು ನಿಲುವಳಿ ಸೂಚನೆ ಮೂಲಕ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಅಂದರೆ ಈಗ ಸಾಲ ವಸೂಲಿ ತಡೆಗೆ ತಕ್ಷಣ ಒಂದು ಆದೇಶ ಹೊರಡಿಸಿ; ಈ ಭರವಸೆ ಕೊಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ: ಈ ಸಬಜ್ಜನ್ನು ಮಧ್ಯಾಹ್ನದ ಮೇಲೋ ನಾಳೆಯೋ ತೆಗೆದುಕೊಳ್ಳಿ, ನಮ್ಮದೇನೂ ಆಭ್ಯಂತರ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸ್ವಾಮಿ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಭಾಷಣಕ್ಕಿಂತ ಇದು ಮಹತ್ವವಾದುದು. ಇದಕ್ಕೆ ತಾವು ಯಾವುದೇ ಸಮಯ ನಿಗದಿ ಮಾಡಿ, ಮಧ್ಯಾಹ್ನ ತೆಗೆದುಕೊಳ್ಳುತ್ತೀರಾ ಸ್ವಾಮಿ?

ಅಧ್ಯಕ್ಷರು: ಮಧ್ಯಾಹ್ನ ಅಥವಾ ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ, ಮುಖ್ಯಮಂತ್ರಿಗಳು ಇರುತ್ತಾರೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಜನವರಿ 31ನೇ ತಾರೀಖು ಬಳ್ಳಾರಿಯಲ್ಲಿ ನಡೆದ ಘಟನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಸ್ವಾಮಿ ಅಧ್ಯಕ್ಷರೇ, ತಮ್ಮ ಅನುಮತಿ ಕೇಳಿ ಜನವರಿ 31ನೇ ತಾರೀಖು ಬಳ್ಳಾರಿಯಲ್ಲಿ ನಡೆದಿರುವ ಘಟನೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸದನದ ಗಮನಕ್ಕೆ ತರಬಯಸುತ್ತೇನೆ. ತುಂಗಭದ್ರ ಹೈಲೆವಲ್ ಕೆನಾಲ್ನಿಂದ ನಾವು ಫೆಬ್ರವರಿ 10ನೇ ತಾರೀಖಿನವರೆಗೂ ಮಾತ್ರ ನೀರು ಬಿಡುತ್ತೇವೆ. ಫೆಬ್ರವರಿ 10ರ ನಂತರ ನಾವು ನೀರು ಬಿಡುವುದಕ್ಕಾಗುವುದಿಲ್ಲವೆಂಬ ವಿಚಾರವನ್ನು ಅವರು ಪ್ರಸ್ತಾಪ ಮಾಡಿ, ಸುಮಾರು 15-20 ಸಾವಿರ ರೈತರು ಸೇರಿದಾಗ ಅವತ್ತು ಲಾಠಿಚಾರ್ಜಾಗಿ, ಅಶ್ರುವಾಯು ಸಹಿತ ಪೋಲಿಸರು ಸಿಡಿಸಿ, ಒಬ್ಬ ಡಿವೈಎಸ್ಪಿ, ಸರ್ಕಲ್ ಇನ್ಸ್ಪೆಕ್ಟರ್ಗೆ, ನೂರಾರು ರೈತರಿಗೆ ಗಾಯವಾಗಿರುವುದೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿರುವಂತಹ ವಿಚಾರ. ಈಗೇನಾಗಿದೆಯೆಂದರೆ ಆದಾದನಂತರ ನಾನು ಬಳ್ಳಾರಿಗೆ ಹೋಗಿದ್ದೆ, ಅಲ್ಲಿ ರೈತರ ಪ್ರತಿನಿಧಿಗಳು ನನ್ನನ್ನು ಭೇಟಿ ಮಾಡಿದ್ದರು. ಮಾನ್ಯ ಅಧ್ಯಕ್ಷರೇ, ಅಲ್ಲೇನಾಗಿದೆ ಎಂದರೆ, ಸುಮಾರು ಒಂದು ಲಕ್ಷ ಎಕರೆ ಜಮಿನಿಗೆ ನೀರನ್ನು ಈಗ ಕೊಡದೆಹೋದರೆ ಬೆಳೆ ಹಾಳಾಗಿ ಹೋಗಿಬಿಡುತ್ತದೆ. ಅಲ್ಲಿರುವವರು ಸುಮಾರು 100 ರಿಂದ 120 ಕೋಟಿ ರೂಪಾಯಿ ಬೆಲೆ ಬಾಳುವ ಬೆಳೆಗಳು ಸಂಪೂರ್ಣವಾಗಿ ನಾಶವಾಗಿ ಬಿಡುತ್ತದೆ ಎಂಬ ಮಾತು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅವರನ್ನು ನಾನು ಬೆಂಗಳೂರಿನಲ್ಲಿ ಭೇಟಿ ಮಾಡುತ್ತೇನೆ ಎಂದು ಹೇಳಿ ಬಂದಿದ್ದಾರೆ. ಮಾನ್ಯ ಉಪಮುಖ್ಯಮಂತ್ರಿಗಳು ಸಹ ಹೋಗಿದ್ದರು. ನೀವು ಬೆಂಗಳೂರಿಗೆ ಬನ್ನಿ ನಾವೆಲ್ಲ ಭೇಟಿ ಮಾಡೋಣ ಎಂದು ಹೇಳಿದರು. ಇಲ್ಲಿಗೆ ಬಂದರೆ ಮುಖ್ಯಮಂತ್ರಿಗಳೇ ಅವರ ಕೈಗೆ ಸಿಕ್ಕಿಲ್ಲ, ಆದಾದನಂತರ ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಭೇಟಿ ಮಾಡಿದ್ದಾರೆ. ವಿಧಾನಪರಿಷತ್ತಿನಲ್ಲಿ ವಿರೋಧ ಪಕ್ಷದ ಉಪನಾಯಕರಾಗಿರುವ ತಿಪ್ಪಣ್ಣನವರು, ಆಳುವ ಪಕ್ಷದ ರಾಮಪ್ಪನವರು ಹಾಗೂ ಇತರೇ ರಾಜಕೀಯ ಮುಖಂಡರುಗಳೆಲ್ಲಾ ಸೇರಿ, ಉಪಮುಖ್ಯಮಂತ್ರಿಗಳು ಭೇಟಿ

ಮಾಡಿದಾಗ ಅಲ್ಲಿ ಭರವಸೆ ಕೊಟ್ಟಿದ್ದಾರೆ. ನಿಮ್ಮನ್ನು ಭೇಟಿ ಮಾಡುತ್ತೇವೆ ಬೆಂಗಳೂರಿಗೆ ಬನ್ನಿ ಎಂದು ಹೇಳಿದ್ದಾರೆ, ಇಲ್ಲಿಗೆ ಬಂದರೆ ಅವರು ಇಲ್ಲವೇ ಇಲ್ಲ ನಾಪತ್ತೆ. ಆದಾದ ನಂತರ ಇವರು ಅವರನ್ನು ಕರೆಯಿಸಿ ಮಾತನಾಡಿದ್ದಾರೆ. ನಾನು ಆಂಧ್ರದ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ನೀರನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ಕೊಟ್ಟಿದ್ದೀರಿ ಎಂದು ರೈತರು ಹೇಳುತ್ತಿದ್ದಾರೆ. ನೀವು ಆಂಧ್ರದ ಮುಖ್ಯಮಂತ್ರಿಗಳ ಜೊತೆ ಬೇಕಾದರೂ ಮಾತನಾಡಿ, ಒಟ್ಟಿನಲ್ಲಿ ಅಲ್ಲಿರುವ ಅಧಿಕಾರಿಗಳು ಹೇಳುವ ಪ್ರಕಾರ, ರೈತರು ಹೇಳುವ ಪ್ರಕಾರ, ಸುಮಾರು ಒಂದೂವರೆ ಟಿಎಂಸಿಯಷ್ಟು ನೀರು ಇನ್ನೂ ಬಿಡುಗಡೆ ಆಗಿಲ್ಲ; ತಪ್ಪು ಮಾಹಿತಿಯನ್ನು ಅಲ್ಲಿರುವ ಕೆಲವು ಕೆಳಮಟ್ಟದ ಅಧಿಕಾರಿಗಳು ಕೊಟ್ಟಿದ್ದಾರೆ ಎಂಬ ವರದಿ ನನಗೆ ಬಂದಿದೆ. ಆದ್ದರಿಂದ ನಾನು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುವುದು ಏನೆಂದರೆ, ಕೊನೆಯ ಪಕ್ಷ ಮಾರ್ಚಿ 15ನೇ ತಾರೀಖಿನವರೆಗಾದರೂ ನೀರನ್ನು ಬಿಡಲಿಕ್ಕೆ ನೀವು ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇಹೋದರೆ ಸುಮಾರು 120 ಕೋಟಿ ರೂಪಾಯಿಗಳ ಬೆಳೆ ಹಾಳಾಗಿ ಹೋಗುತ್ತದೆ, ಅಲ್ಲಿ ರೈತರ ರಕ್ಷಣೆಗೆ ಸರ್ಕಾರ ಬರಬೇಕು ಎಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ಬಗ್ಗೆ ರೈತರು ಏನು ಹೇಳುತ್ತಾರೆ ಅಂದರೆ, ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದ್ದೆವು ಎಂದು; ಪಕ್ಕದ ರಾಜ್ಯದ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಇನ್ನೊಂದು ತಿಂಗಳು ನೀರು ಕೊಡದೇ ಇದ್ದರೆ.....

ಶ್ರೀ ಎಂ. ಶಂಕರರೆಡ್ಡಿ: ಮಾನ್ಯ ಅಧ್ಯಕ್ಷರೇ, ಅವರು ಪತ್ರಿಕೆಯಲ್ಲಿ ಬರಲೆಂದು ಮಾತನಾಡುತ್ತಾರೆ. ನಾನು ನಿಜವಾದ ವಿಷಯ ಹೇಳುತ್ತಾ ಇದ್ದೇನೆ. ಈ ನಮ್ಮ ಉಪನಾಯಕರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು ಹೇಳಿದ್ದು ಸತ್ಯಕ್ಕೆ ಬಹಳ ದೂರವಾದದ್ದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏಕೆಂದರೆ, 30ನೇ ತಾರೀಖು ನಾವು ಮುಖ್ಯಮಂತ್ರಿಗಳನ್ನು ಭೇಟಿಯಾಗಿದ್ದೆವು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಇವರ ಸರ್ಟಿಫಿಕೇಟ್, ಉತ್ತರ ನನಗೆ ಬೇಕಾಗಿಲ್ಲ. ನನಗೆ ಸರ್ಕಾರದ ಉತ್ತರ ಬೇಕು.

(ಗದ್ದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ; ನಾನು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ.

ಡಾ॥ ಜೀವರಾಜ ಆಳ್ವ: ಕಾಂಗ್ರೆಸ್ ಸದಸ್ಯರು ಕರ್ನಾಟಕದ ರೈತರಿಗೆ ನೀರು ಬೇಕು, ಆಂಧ್ರದ ಮುಖ್ಯಮಂತ್ರಿಗಳನ್ನು ಕೇಳಬೇಕು ಅಂದಾಗ, ಏನೋ ಹೇಳುತ್ತಿದ್ದಾರೆ.

ಶ್ರೀ ಎಂ. ಶಂಕರರೆಡ್ಡಿ: ಈಗ ಬಳ್ಳಾರಿಗೆ ಹೋಗಿ, ಜನ ನಿಮ್ಮನ್ನು ಹರಾಜ್ ಹಾಕುತ್ತಾರೆ.

(ಗೊಂದಲ)

ಶ್ರೀ ಎಂ. ಶಂಕರರೆಡ್ಡಿ: ಮಾನ್ಯ ಅಧ್ಯಕ್ಷರೇ, 30ನೇ ತಾರೀಖು ನಾವು ಮುಖ್ಯಮಂತ್ರಿಗಳನ್ನು ಕಂಡು ಮಾತನಾಡಿದೆವು. ಅಲ್ಲಿ ಹತ್ತಿ ಬೆಳೆಗೆ ಬೇಕಾದ ನೀರು ಕೊಟ್ಟಿದೆ; ಆದರೂ ರೈತರಿಗೆ ಅಲ್ಲಿನ ಹತ್ತಿ ಬೆಳೆಗೆ ನೀರು ಬೇಕು ಎಂದು ಕೇಳಿದಾಗ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಇನ್ನೂ 10 ದಿವಸ ಹೆಚ್ಚಿಗೆ ಕೊಡುವಂತಹ ವ್ಯವಸ್ಥೆಯನ್ನು ಅವರು ಮಾಡಿದರು. ಆ ವಿಷಯವನ್ನು ಅಲ್ಲಿ